## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.

**ಓ.ಎಸ್ ಸಂಖ್ಯೆ.304*2022*** ಪಿಡಬ್ಲೂ .1

ದಿನಾಂಕಃ 18-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- 1 ನೇ ಪ್ರತಿವಾದಿ ಪರ ವಕೀಲರಿಂದಃ-

ಶಾಲಾ ಮಕ್ಕಳ ಫೀಸ್ ಕಟ್ಟಲು 1 ನೇ ಪ್ರತಿವಾದಿಗೆ ಆಸ್ತಿ ಮಾರಾಟ ಮಾಡಿರುವ ಬಗ್ಗೆ ವಾದ ಪತ್ರ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೋ ನೆನಪಿಲ್ಲ. ಬೈಯ್ಯಮ್ಮನವರಿಂದ ನನ್ನ ತಂದೆ ದಾವಾ ಆಸ್ತಿ ಖರೀದಿಸಿದ ಬಗ್ಗೆ ದಾಖಲೆ ಹಾಜರು ಮಾಡಿಲ್ಲ. ಬೈಯ್ಯಮ್ಮನವರಿಂದ ನನ್ನ ತಂದೆಗೆ ದಾವಾ ಆಸ್ತಿ ಯಾವ ರೀತಿ ಬಂದಿರುತ್ತದೆ ಎಂಬುದರು ಬಗ್ಗೆ ವಾದ ಪತ್ರ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿಲ್ಲ. ಈ ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಸದರಿ ತನ್ನ ಸಹಿಯನ್ನು ನೋಡಿ ಗುರುತಿಸಿದ ಕಾರಣ ವಾದಿ ಪರ ವಕೀಲರ ತಕರಾರಿನ ಮೇರೆಗೆ ಅದನ್ನು ನಿಡಿ. 1 ಎಂದು ಸಹಿಯನ್ನು ನಿಡಿ. 1 (ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿನ ಬೇರೆಯವರ ಸಹಿಗಳ ಬಗ್ಗೆ ಗೊತ್ತಿಲ್ಲ. ಸದರಿ ಪತ್ರವನ್ನು ಬರೆಯುವ ಕಾಲಕ್ಕೆ ನನ್ನ ತಂದೆ ಬದುಕಿದ್ದು, ನಾನು ಮತ್ತು ನನ್ನ ಅಕ್ಕತಂಗಿಯರು ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಿಡಿ. 1 ರಲ್ಲಿ ಏನು ಬರೆದಿರುತ್ತದೆ ಎಂದು ಗೊತ್ತಿಲ್ಲ. ನಿಡಿ. 1 ಕ್ಕೆ ಸಹಿ ಮಾಡುವ ಕಾಲಕ್ಕೆ ಅದರಲ್ಲಿ ಬರವಣಿಗೆ ಆಗಿತ್ತೋ ಇಲ್ಲವೋ ಗೊತ್ತಿಲ್ಲ. ನಿಡಿ. 1 ರ ದಾಖಲೆಯನ್ನು ನನ್ನ ತಂದೆ ಹೆಸರಿಗೆ ಅವರಿಂದ ವಾದಿಯರಾದ ನಾವು ತಲಾ 25 ಸಾವಿರ ರೂಗಳಂತೆ ಪಡೆದು ದಾವಾ ಆಸ್ತಿ ಮತ್ತು ಇನ್ನಿತರ ಆಸ್ತಿಗಳ ಬಗ್ಗೆ ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

ನಡುವತಿ ಗ್ರಾಮದಲ್ಲಿ ನಾನು 1 ಎಕರೆ 30 ಗುಂಟೆ ಜಮೀನನ್ನು ಖರೀದಿಸಿರುತ್ತೇನೆ ಎಂದರೆ ಸುಳ್ಳು. ಸದರಿ ಜಮೀನನ್ನು ನನ್ನ ತಂದೆಯವರಿಂದ ಹಣ ಪಡೆದು ಖರೀದಿಸಿರುತ್ತೇನೆ ಎಂದರೆ ಸುಳ್ಳು. ನಿಡಿ. 1 ನ್ನು ಬರೆವ ಕಾಲಕ್ಕೆ 1 ನೇ ಪ್ರತಿವಾದಿ ಗೊಲ್ಲಹಳ್ಳಿ ಗ್ರಾಮದಲ್ಲಿ ಓದುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಮ್ಮ 1 ನೇ ಪ್ರತಿವಾದಿಗೆ ತಿಳಿಯದಂತೆ ವಾದಿಯರಾದ ನಾವು ನಮ್ಮ ತಂದೆಯಿಂದ ತಲಾ 25 ಸಾವಿರ ಹಣ

ಪಡೆದು ನಿಡಿ. 1 ನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ವಾದಿಯರಾದ ನಾವು ಮತ್ತು 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಮಾರಾಟ ಮಾಡಿದ ಸಮಯದಲ್ಲಿ ನಮಗೆ 1 ನೇ ಪ್ರತಿವಾದಿ ತಲಾ 25 ಸಾವಿರ ರೂಗಳನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. 2002 ರಲ್ಲಿ ನಾವು ನಿಡಿ. 1 ನ್ನು ಬರೆದುಕೊಟ್ಟ ನಂತರ ದಾವಾ ಆಸ್ತಿಯಲ್ಲಿ ಭಾಗ ಕೇಳಲು ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಒಟ್ಟು ಕುಟುಂಬದಲ್ಲಿ ಇದ್ದೇವೆ ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಾವೆಲ್ಲರೂ 1 ನೇ ಪ್ರತಿವಾದಿಯೊಂದಗೆ ದಾವಾ ಆಸ್ತಿಯಲ್ಲಿ ಒಟ್ಟು ಸ್ವಾದೀನದಲ್ಲಿರುವ ಬಗ್ಗೆ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಿಡಿ. 1 ರಂತೆ ಹಣ ಪಡೆದು ನಾವು ದಾಖಲೆಯನ್ನು ಬರೆದುಕೊಟ್ಟಿದ್ದರು ಸಹ ಮತ್ತು ದಾವಾ ಆಸ್ತಿಯನ್ನು ಶ್ರೀಧರ ರವರಿಗೆ ಮಾರಾಟ ಮಾಡುವ ಸಮಯದಲ್ಲಿ 1 ನೇ ಪ್ರತಿವಾದಿಯಿಂದ ತಲಾ 25 ಸಾವಿರ ರೂಗಳಂತೆ ಹಣ ಪಡೆದಿದ್ದರು ಸಹ 1 ನೇ ಪ್ರತಿವಾದಿಗೆ ತೊಂದರೆ ನೀಡಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿ ಪರ ಪಾಟೀ ಸವಾಲಿಗೆ ಮುಂದುಡಲಾಯಿತು.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.